ಮಾಡ್ದಾಂಗ ಮಾಡ್ತೀಯಲೆ. ನಾಳಗೆ, ದಣೀ ದಿವ್ಸಾಯ್ತು. ಗಂಜಿ ಹುಳಗಾ ಮಾಡ ಉಡ್ಕಂಡ ಬಿದ್ದಕಂಡ್ರಾಯ್ತು. ಅದೇನೋ ಹೇಳ್ತರಲೆ, ಅವನಿರ್ಪ ಕ್ಷೇತ್ರವೆ ಅವಿಮುಕ್ತ ಕ್ಷೇತ್ರ... ಅಂತ. ಹಾಗೆ ಈ ವಂದಿಗಿ ಪ್ರದೀಪ ಎಲ್ಲಿವನೋ ಅಲ್ಲೆ ಗಂಜಿ ಹುಳಗಾ ಕ್ಷೇತ್ರ..." ಹೆಂಡತಿಯ ತಲೆಹೊಕ್ಕ ಭೂತವನ್ನು ಬಿಡಿಸಲು ಅವನು ಎಲ್ಲ ಸೊಪ್ಪಿನೇಟಿನ ಪ್ರಯೋಗವನ್ನೂ ಮಾಡಿದ್ದ. ಆದರೆ ಅದ್ಯಾಕೋ ಶಾಲಿನಿಗೆ ಆ ಎಳೆತ ಬಿಗಿಯಾಗೇ ಇದ್ದಂತಿತ್ತು. ಅಲ್ಲವೇ ಮತ್ತೆ? ಇಂದು ಮಧ್ಯಾಹ್ನ ಕೂಡ ಕರೆ ಬಂದಿತ್ತು. "ಮ್ಯಾಂಮ್, ನಾನು 'ಸುವಿಧಾ ಮೆಡಿಕಲ್ ಹೆಲ್ಪ್‌ಲೈನ್ ಏಜೆನ್ಸಿ'ಯಿಂದ ಮಾತಾಡ್ತಿರೋದು. ನಾವು ಸಿಲೆಕ್ಟ್ ಮಾಡಿರೋ ಆಲ್ ಕಪಲ್ಸ್ ನಾಳೆಯ ಎಕ್ಸಫೋಗೆ ಜಾಯನ್ ಆಗ್ತಿದಾರೆ ಮ್ಯಾಂಮ್. ನೀವೂ ಕಂಪಲ್ಸರಿ ಬರಬೇಕು. ಪ್ಲೀಸ್, ಟೈಮ್ ನಿಮ್ಮ ವಾಟ್ಸ್‌ಆ್ಯಪ್‌ಗೆ ಅಪ್‌ಲೋಡ್ ಮಾಡಿದೀನಿ. ಅಲ್ಲಿ ಬಂದು ಮಾಧವಿ ದೇಸಾಯಿಯವರ ಇನ್‌ವೈಟಿ ನಾವು ಅಂತ ಹೇಳಿ. ಬನ್ನಿ ಫ್ರೀ ಟ್ರಿಪ್ ಆಫರ್ ತಪ್ಪಿಸಿಕೊಳ್ಳಬೇಡಿ..." ಅಹಹಾ ಕೇಳ್ತಿದ್ದರೆ ಕೇಳ್ತಾನೇ ಇರಬೇಕು ಅನ್ನೋ ದನಿ. ಮನುಷ್ಯ ಧ್ವನಿಗೆ ಇಂತಹ ಇಂಪೂ ಇರುತ್ತೈ? ಶಾಲಿನಿಗೆ ರಾಗದ ಮಾಧುರ್ಯದ ಬಗ್ಗೆ ಅಂತಹ ಆಪ್ತತೆಯೇನೂ ಇಲ್ಲ. ಪ್ರದೀಪನಿಗೆ ಹಿಂದೂಸ್ಥಾನೀ ರಾಗ ಕೇಳುವ ಹುಕಿಯಾದರೂ ಇದೆ. ಧಾರವಾಡದ ಕಲಾಭವನದಲ್ಲಿ, ಸೃಜನಾದಲ್ಲಿ ಸಂಗೀತದ ಕಾರ್ಯಕ್ರಮ ಇದ್ದದ್ದು ಪೇಪರಲ್ಲಿ ನೋಡಿದವನೆ 'ಏಯ್, ಶಾಲಿ ಹೋಗೋಣವೇ?' ಅಂತ ಕೇಳುವುದು. ಹೀಗೆ ಕೇಳಿದವನು ಇನ್ನೊಂದು ತಾಸೊತ್ತಿನಲ್ಲಿ ಎಲ್ಲ ಮರೆತಿರುತ್ತಾನೆಂದು ಇವಳು 'ಹೂಂ, ಉಹೂಂ' ಮಧ್ಯದ ಯಾವುದೋ ಸ್ವರ ತೆಗೆದು ಉತ್ತರಿಸೋದು ಮಾಮೂಲಾಗಿಬಿಟ್ಟಿತ್ತು. ಕಾರ್ಯಕ್ರಮ ಮುಗಿದ ವರದಿ ನೋಡಿದನೆಂದರೆ ಪೂರಾ ದನಿ ಎತ್ತರಿಸಿ; "ಶಾಲು, ನಿನ್ನಗೆ ಎಂಥಾ ಚೆಂದದ ಕಾರ್ಯಕ್ರಮ ಆಗಹೋಗೀದ. ಥೋ ಗುತ್ತಿದ್ರೆ ಹೋಗೂಕಾತತ" – ಅಂತ, ಇವನಿಲ್ಲದೆ ಹಾಡುಗಾರರು ಚೀಜ್ ಎತ್ತುವುದಿಲ್ಲವೆಂಬಂತೆ, ಇದುವರೆಗೂ ಧಾರವಾಡದಲ್ಲಿ ಹರಿವ ಸಂಗೀತ ಸುಧೆಯು ಇವನ ಉಪಸ್ಥಿತಿಯಲ್ಲಿ ಮಾತ್ರ ನಡೆಯಿತು ಎಂಬಂತೆ ಹೇಳುತ್ತಿದ್ದ. ಇದೇ ಪ್ರಸಂಗ ಉಪರಾಟೆಯಾಗುವುದು ನಾಟಕದ ಸುದ್ದಿ ಬಂದಾಗ. ಶಿವರಾತ್ರಿಯೆಂದರೇ ಎರಡಾದರೂ ನಾಟಕ ನೋಡುವುದು – ಅಂತ ಬೆಳೆದ ಶಾಲಿನಿಗೆ ಈಗಲೂ ಆ ಉಮೇದಿ ಹಾಗೇ ಇದೆ. ಆದರೆ ಅಂದುಕೊಂಡಿದ್ದೆಲ್ಲ ಆಗುವುದಿದೆಯೇ? ಈ ಪಡಪೋಸಿ ಜಗತ್ತಿನಲ್ಲಿ?

> ಶಾಲಿನಿಯ ಮನಸ್ಸಿನೊಳಗೆ ಆವೇಶದ ಮಾತುಗಳು ಕಡಲ ಅಲೆಗಳ ಹಾಗೆ ರಪರಪನೆ ರಾಚುತ್ತಿವೆ ಅನ್ನಿಸಿತ್ತು ಪ್ರದೀಪನಿಗೆ. ಕೋಪ, ಮುಜುಗರ ತಾಳಲಾಗದೆ ದೊಡ್ಡದಾಗಿ ಪ್ರತಿಭಟಿಸಿಬಿಡುವ ಶಾಲಿನಿಯ ಗುಣ ಪ್ರದೀಪನಿಗೆ ತಿಳಿಯದ್ದಲ್ಲ.

ಈಗ ನನ್ನ ಪ್ರದೀಪನೇನಾದರೂ ಈ ಸುರುಲೀ ದನಿಯನ್ನು ಕೇಳಿದರೆ ನಾಕು ದಿನ ಮುಂಚೇ ಅವಳು ಹೇಳಿದ ಜಾಗೆಯಲ್ಲಿ ಹಾಜರಿ ಹಾಕುತ್ತಿದ್ದನೇನೋ. ದನಿಯೇ ಹೀಗಿದೆ. ನೋಡಲು ಹೇಗಿದ್ದಾಳು – ಅಂತ ಲೆಕ್ಕ ಹಾಕುತ್ತಿದ್ದನೇನೋ. ಹೆಣ್ಣು ಹೆಂಗಸು ನಾನೇ, ಉತ್ತರಿಸುವುದರ ಬದಲು ಬರೀ ಹೂಂಗುಟ್ಟಿ ಆ ದನಿಯನ್ನು ಮೆಲ್ಲುತ್ತಿರುವಾಗ... ಪುಣ್ಯ, ಆಫರ್, ನನ್ನ ನಂಬರಿಗೆ ಲಿಂಕ್ ಮಾಡಿದ್ದಾರೆ. ಕಳೆದ 15 ದಿನಗಳಿಂದ ಮನಸ್ಸಿಡೀ ಈ ಆಫರ್ ಸುದ್ದಿಯೇ. ಸುಮ್ಮನೆಯೇ?